ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಕಳುಹಿಸಬೇಕು. ಅಲ್ಲಿ ಸ್ಕ್ರುಟಿನಿ ಆಗಬೇಕು. ಮತ್ತೆ ವಾಪಸ್ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಬಂದು, ಅವರು ಸರ್ಟಿಫೈ ಮಾಡಬೇಕು. ಅಲ್ಲಿಂದ ತಾಲ್ಲೂಕು ಕಚೇರಿ, ಅಲ್ಲಿಂದ ಎ.ಸಿ.ಯವರ ಕಚೇರಿಗೆ ಹೋಗಬೇಕು, ಎ.ಸಿ. ಯವರ ಕಚೇರಿಯಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಬರಬೇಕು. ಜಿಲ್ಲಾಧಿಕಾರಿಗಳಾದ ಮೇಲೆ ಧಾರ್ಮಿಕ ಮತ್ತು ದತ್ತಿ ಆಯುಕ್ತರು. ಇಷ್ಟೊಂದು ದೂರ ಕಳುಹಿಸುವುದನ್ನು ತಾವು ಸರಳೀಕರಣ ಮಾಡಿ, ತಹಶೀಲ್ದಾರ್ ಕಚೇರಿಯಿಂದ ನೇರವಾಗಿ ಧಾರ್ಮಿಕ ಮತ್ತು ದತ್ತಿ ಆಯುಕ್ತರಿಗೆ ಕಡತವನ್ನು ಕಳುಹಿಸಿ ಮಂಜೂರ್ಮಾಡಿಸಿಕೊಡತಕ್ಕ ಒಂದು ಸರಳೀಕರಣವನ್ನು ತಾವು ಮಾಡಬೇಕೆಂದು ಇಷ್ಟು ವಿಚಾರವನ್ನು ತಿಳಿಸಿ, ಮಾನ್ಯ ಉಪಾಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಪಟ್ಟಿ ಪ್ರಕಾರ, ಶ್ರೀಯುತ ಕೆ. ಕುಶಾಲ, ಶ್ರೀಯುತ ಷಫಿ ಅಹಮದ್, ಶ್ರೀಯುತ ರಾಜುಗೌಡ, ಶ್ರೀಯುತ ಕಮರುಲ್ ಇಸ್ಲಾಂ ಇದ್ದಾರೆ. ಇವರುಗಳ ಸದನದಲ್ಲಿ ಹಾಜರಿಲ್ಲದೇ ಇರುವುದರಿಂದ, ಈ ಚರ್ಚೆ ಇಲ್ಲಿಗೆ ಮುಗಿಯಿತು.

ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಸಭಾ ಸದಸ್ಯರಾದ ಶ್ರೀಯುತ ವಾಟಾಳ್ ನಾಗರಾಜ್ ಅವರನ್ನು ದಿನಾಂಕ 13-3-1992 ರಂದು ಸಮಯ 10 ಗಂಟೆ 10 ನಿಮಿಷದಲ್ಲಿ ವಿಧಾನ ಸೌಧದ ಪಶ್ಚಿಮ ದ್ವಾರದ ಮುಂದೆ ಬಂಧಿಸಿ, ಅದೇ ದಿನ 12 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನ ಸೌಧ ಠಾಣೆ, ಬೆಂಗಳೂರು, ಇವರಿಂದ ನಮಗೆ ಸಂದೇಶ ಬಂದಿದೆ.

ಈಗ ಸಭೆಯನ್ನು ಮುಂದೂಡಿ, ನಾಳೆ ಬೆಳಿಗ್ಗೆ 10 ಗಂಟೆಗೆ ಮತ್ತೆ ಸಮಾವೇಶವಾಗುವುದು.

(ಸದನವು ಸಂಜೆ 7 ಗಂಟೆ 5 ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ, ದಿನಾಂಕ 17-3-92 ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)